

ಅಂದರು. ಬಹಳ ವರ್ಷಗಳ ತನಕ ನಮ್ಮನ್ನ ಜನ ಮನುಷ್ಯರು ಅಂತಾನೇ ನೋಡಿದ್ದಿಲ್ಲ ಮೇಡಂ. ದಲಿತರನ್ನ 'ಹೊಲೆಯ' ಅಂದಂಗ, ನಮ್ಮನ್ನ 'ಗೊಂದಲಿಗ್ಯ', 'ಬುಡಬುಡಕೆಯವ್ರು' ಅಂತಲೇ ಕರೀತಿದ್ರು. ಯಾಕೆ? ನಮ್ಮ ತಂದೆ- ತಾಯಿ ನಮಗೆ ಹೆಸರಿಟ್ಟಿದ್ದಿಲ್ವ, ಆ ಹೆಸರಿಂದ ಯಾಕೆ ಜನ ನಮ್ಮನ್ನ ಗುರುತಿಸಬಾರ್ದು? ಅಂತ ನನಗನ್ನಿಸ್ತಿತ್ತು. ಅವರು ನಮ್ಮನ್ನ ಅವಮಾನದ, ಅಸಹ್ಯಕರ, ಅಲಕ್ಷಿತ ದೃಷ್ಟಿಯಿಂದ ನೋಡ್ತಾ ಇದ್ದದ್ದಕ್ಕೇ ಹಾಗೆ ಕರೀತಿದ್ರು. 'ಗೊಂದಲಿಗ್ಯಾ' ಅನ್ನೋದು ಸಮಾಜದ ಅಪಮಾನವನ್ನ, ತಿರಸ್ಕಾರವನ್ನ ಪ್ರತಿನಿಧಿಸೋ ಪದ... ಹಾಗಾಗಿ ಅದೇ ಪದವನ್ನ ನನ್ನ ಪುಸ್ತಕಕ್ಕೆ ಶೀರ್ಷಿಕೆ ಕೊಟ್ಟೆ.

**◆ ಹಾಗಾದ್ರೆ ಬದಲಾವಣೆ ಎಲ್ಲಿಂದ ಆಗಬೇಕು? ಹೇಗಾಗಬೇಕು?**

ಅಲೆಮಾರಿ ಬದುಕಿಗೆ ಒಗ್ಗಿಕೊಂಡಿದ್ದರಿಂದಲೋ ಏನೋ ಅಥವಾ ಆ ಗುಣ ನಮ್ಮ ರಕ್ತದ ವಂಶವಾಹಿನಿಯಲ್ಲಿ ಹರೀತಿರೋದಕ್ಕೋ ಏನೋ, ಒಂದು ಕಡೆ ಗಟ್ಟಿಯಾಗಿ ನಿಂತು ನಮ್ಮದೇ ಒಂದು 'ಸಂಘ' ಅಥವಾ 'ಸಂಘಟನೆ' ಹುಟ್ಟು ಹಾಕಬೇಕು ಅನ್ನೋದು ಬಹಳ ದಿನ ನಮ್ಮ ಜನರ ತಲೆಗೆ ಬಂದಿದ್ದಿಲ್ಲ. ಈಗ ಎರಡು- ಮೂರು ದಶಕದಿಂದ ಗಂಭೀರ ಪ್ರಯತ್ನಗಳು ನಡೆದಿದೆ. 'ನಮ್ಮ ಪೂರ್ವಜರು ಹಿಂಗೇ ಬದುಕ್ಯಾರ, ಅವರ ಸಂಪ್ರದಾಯ ಬಿಡಕಾಗಂಗಿಲ್ಲ, ಹಿಂಗೇ ಇರೋಣು' ಅನ್ನುವ ಜನರೂ ಅದಾರ. ಈಗ ನೋಡಿ, ಒಳಮೀಸಲಾತಿಗೆ ಎಷ್ಟು ಉಗ್ರ ಹೋರಾಟ ಮಾಡಿದ್ರು, ಅಂಥ ಕೆಚ್ಚು ನಮ್ಮೊಳಗಿಲ್ಲ. ನಮ್ಮ ಜನಗೋಳ್ಗೆ ಎದ್ದ ಕೂಡಲೆ ಎರಡು ಹೊತ್ತಿನ ಊಟ ಸಂಪಾದನೆ ಮಾಡೋದ್ಹೆಂಗ ಅನ್ನೋದೇ ಚಿಂತೆ ಇರೋವಾಗ ಶಿಕ್ಷಣ, ಹೋರಾಟಕ್ಕೆ ಎಲ್ಲಿಂದ ಗಮನ ಕೊಡಬೇಕು ಹೇಳಿ? ಈ ಅಸಹಾಯಕತೆ ಗಮನಿಸಿ ರಾಜಕೀಯದಲ್ಲಿ ಇವರನ್ನ ಎಂ.ಎಲ್.ಸಿ. ಅಂತ ನಾಮನಿರ್ದೇಶನ ಮಾಡಿ ತೊಡಗಿಸೋದು, ಪರಿಶಿಷ್ಟರಿಗೆ ಇರೋ ಹಾಗೆ ಕೆಲವು ಮೀಸಲಾತಿ ಕ್ಷೇತ್ರಗಳನ್ನ ನಮ್ಮ ಸಮುದಾಯಕ್ಕೂ ಕೊಡೋದು ಇಂತವನ್ನ ಅಲ್ಪಸ್ವಲ್ಪ ಪ್ರಾಮಾಣಿಕತೆ ಉಳಿಸಿಕೊಂಡಿರೋ ರಾಜಕಾರಣಿಗಳಾದ್ರೂ ಮಾಡಬೇಕು ಅನ್ನಿಸ್ತದ. ನೋಡ್ರೀ... ನಮ್ಮ ಸಮುದಾಯದ ಮಕ್ಕಳಿಗೆ ಸರಿಯಾದ ಸ್ಕಾಲರ್‌ಶಿಪ್ ಸಹಿತ ಇಲ್ಲ, ನಮ್ಮ ಸಮುದಾಯಕ್ಕೆ ಅಂತಾನೇ ಜಿಲ್ಲೆಗೆ ಒಂದಾದ್ರೂ ಹಾಸ್ಟೆಲ್ ಇಲ್ಲ. ಯಾಕಂದ್ರ ನಮ್ಮಿಂದ ಅವರಿಗೆ ಯಾವ ಉಪಯೋಗನೂ ಇಲ್ಲಲ್ರಿ... ಕೋಟಿಗಟ್ಟಲೆ ತೆರಿಗೆ ಮೋಸ ಮಾಡಿ, ದೇಶ ಬಿಟ್ಟು ಓಡಿ ಹೋದ ಜನ ನಮ್ಮ ಕಣ್ಣ ಮುಂದೇನೆ ಇದ್ದಾರ, ನಮ್ಮ ಸಮುದಾಯದವರಿಗೆ ಕೊಡೋ ಇಪ್ಪತ್ತೈದು- ಐವತ್ತು ಸಾವಿರ ಸಾಲದ ಬಡ್ಡಿ ಕಟ್ಟಲಿಲ್ಲ ಅಂತ ಮಾರಾಟಕ್ಕೆ ಅಂತ ಕೊಂಡಿರೋ ಗಾಡಿಗಳನ್ನ, ಮನೇನ ಜಪ್ತಿ ಮಾಡಿದ ಎಷ್ಟೊಂದು ಉದಾಹರಣೆ ನನ್ನ ಕಣ್ಣ ಮುಂದೆ ನಡದಾವ...